ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂಃಸಾಗ್ರಂಇ/ಎಸ್.ಸಿ.ಪಿ-ಟಿ.ಎಸ್.ಪಿ/ಪು.ಖ/61/2018ಪ್ರ/
6565


ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ,
ಬೆಂಗಳೂರು-560 001,
ದಿನಾಂಕ: 09-11-2018.

email:dpl_dir_acts@yahoo.co.in
ದೂ:080-22864990/22867358


ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು

ಮಾನ್ಯರೆ,

ವಿಷಯ:- ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2018ರಲ್ಲಿ ಪ್ರಥಮವಾಗಿ ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ 2018 ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟವಾದ ಕನ್ನಡ ಸಾಹಿತ್ಯ ,ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಮತ್ತು ಆಂಗ್ಲ ಪುಸ್ತಕಗಳನ್ನು ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಖರೀದಿಸುವ ಕುರಿತು ವಿವಿಧ ಲೇಖಕ ಪ್ರಕಾಶಕರಿಂದ/ಪ್ರಕಟಣ ಸಂಸ್ಥೆಗಳು/ಸರಬರಾಜುದಾರರಿಂದ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸಲು ಪ್ರಕಟಣೆ ಹೊರಡಿಸಲಾಗಿದೆ.

ಸದರಿ ಯೋಜನೆಯು ಸರ್ಕಾರದ ವಿಶೇಷ ಯೋಜನೆಯಾಗಿರುವುದರಿಂದ ಪ್ರಕಟಣೆಯನ್ನು ರಾಜ್ಯಾದ್ಯಂತ ಹೆಚ್ಚು ಪ್ರಸಾರವುಳ್ಳ ಕನ್ನಡ ಮತ್ತು ಆಂಗ್ಲಭಾಷಾ ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಈ ಮೂಲಕ ಕೋರುತ್ತೇನೆ. ಪ್ರಕಟಣೆಯ ಪ್ರತಿಗಳನ್ನು ಈ ಪತ್ರದ ಜೊತೆ ಲಗತ್ತಿಸಿದೆ.

ಸದರಿ ಪ್ರಕಟಣೆಯ ವೆಚ್ಚವನ್ನು ಇಲಾಖೆಯು ಭರಿಸಲಿದ್ದು, ಪ್ರಕಟವಾದ ಬಗ್ಗೆ ಪ್ರಕಟಿತ ದೈನಂದಿನ ದಿನಪತ್ರಿಕೆಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

ನಾ: SCP-TSP (Book List) Ten Not/Paper Noti.

13/11/18

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ.ಸಾಗ್ರಂಇ/ನಿಕ/ಯೋವಿ/ಎಸ್‌ಸಿಪಿ–ಟಿಎಸ್‌ಪಿ/61/2018ಪ್ರ/2018–19

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ
4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ,
ಬೆಂಗಳೂರು–560 001,
ದಿನಾಂಕ: 09–11–2018

: **ಪ್ರಕಟಣೆ** :

**ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ (ಎಸ್‌ಸಿಪಿ/ಟಿಎಸ್‌ಪಿ) ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2018 ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.**

*****

2018-19ನೇ ಸಾಲಿಗೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆಯಡಿಯಲ್ಲಿ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2018 ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟಣೆಯಾದ ಕನ್ನಡ ಸಾಹಿತ್ಯ, ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಮತ್ತು ಆಂಗ್ಲ ಭಾಷಾ ಪುಸ್ತಕಗಳನ್ನು ಖರೀದಿಸಲು ಲೇಖಕ, ಲೇಖಕ-ಪ್ರಕಾಶಕ, ಪ್ರಕಟಣ ಸಂಸ್ಥೆಗಳು ಹಾಗೂ ವಿತರಕರಿಂದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಆಯ್ಕೆಗಾಗಿ ಸಲ್ಲಿಸಲಾಗುವ ಪುಸ್ತಕಗಳು ಈ ಕೆಳಗಿನ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

- ಪುಸ್ತಕಗಳು 2018 ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರಬೇಕು. ಮತ್ತು ಪ್ರಕಟವಾದ ಬಗ್ಗೆ ಮುಚ್ಚಳಿಕೆ ಪತ್ರವನ್ನು ಸಲ್ಲಿಸಬೇಕು.ಈಗಾಗಲೇ ಸಲ್ಲಿಸಿದ ಪುಸ್ತಕಗಳು ಪುನಾರವರ್ತನೆ, ಪ್ರಕಟಣಾ ವರ್ಷ ಹಾಗೂ ಪುಸ್ತಕದ ವಿಷಯವನ್ನು ಅದಲು ಬದಲು ಮಾಡಿ ಆಯ್ಕೆಗಾಗಿ ಸಲ್ಲಿಸಿದ್ದಲ್ಲಿ ಅಂತಹ ಲೇಖಕ, ಲೇಖಕ-ಪ್ರಕಾಶಕ, ಪ್ರಕಟಣ ಸಂಸ್ಥೆಗಳು ಹಾಗೂ ವಿತರಕರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.ಪುಸ್ತಕದ ಶೀರ್ಷಿಕೆ, ಗ್ರಂಥಕರ್ತರ ಹೆಸರು, ಪ್ರಕಾಶಕರ ಹೆಸರು, ಪುಟ ಸಂಖ್ಯೆ, ಪ್ರಕಟಣೆಯ ವರ್ಷ, ಇವುಗಳಲ್ಲಿ ತಾಂತ್ರಿಕ ಲೋಪದೋಷಗಳು ಏನಾದರೂ ಇದ್ದಲ್ಲಿ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

- ಮೂವತ್ತೆರಡು ಪುಟಕ್ಕಿಂತ ಕಡಿಮೆ ಪುಟಗಳಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು (ಮಕ್ಕಳ ಪುಸ್ತಕಕ್ಕೆ ಅನ್ವಯಿಸುವುದಿಲ್ಲ)

- ಲೇಖಕರೇ ಪ್ರಕಾಶಕರಾಗಿದ್ದಲ್ಲಿ ಅವರೇ ನೇರವಾಗಿ ಅರ್ಜಿ ಸಲ್ಲಿಸಬೇಕು

- ನ್ಯೂಸ್ ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು

- ಆಯ್ಕೆಗೆ ಒಪ್ಪಿಸಿದ ಯಾವುದೇ ಗ್ರಂಥಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲಾ

- ನಮೂನೆ ನಿಯಮಿತ ಅರ್ಜಿಯಲ್ಲಿ (ಅರ್ಜಿ ನಮೂನೆಯು ಯೋಜನಾ ವಿಭಾಗ, ನಿರ್ದೇಶಕರ ಕಛೇರಿ ಹಾಗೂ ರಾಜ್ಯದ ಎಲ್ಲಾ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ದೊರೆಯುತ್ತದೆ) ಅರ್ಜಿಯಲ್ಲಿ 1. ಪುಸ್ತಕದ ಶೀರ್ಷಿಕೆ, 2. ಲೇಖಕರ ಹೆಸರು ಖಾಯಂ ಮತ್ತು ಅಂಚೆ ವಿಳಾಸ, 3. ಪ್ರಕಾಶಕರ ಹೆಸರು ಮತ್ತು ಪೂರ್ಣ ವಿಳಾಸ (ಪುಸ್ತಕದ ಹಕ್ಕು ಹೊಂದಿರುವ ಬಗ್ಗೆ ಮಾಹಿತಿ ಒದಗಿಸುವುದು) 4. ಪ್ರಕಾಶಕರು ಜಿ.ಎಸ್.ಟಿ .ವ್ಯಾಪ್ತಿಗೆ ಒಳಪಟ್ಟಿರುತ್ತಾರೆಯೇ, ಹಾಗಿದ್ದಲ್ಲಿ ಜಿ.ಎಸ್.ಟಿ.ಸಂಖ್ಯೆಯನ್ನು ನಮೂದಿಸುವುದು. 5. ಪುಸ್ತಕದ ಹಕ್ಕು (ದಾಖಲಾತಿ ಒದಗಿಸುವುದು) 6. ಪ್ರಥಮ ಮುದ್ರಣದ ವರ್ಷ 7. ಪುಸ್ತಕದ ಮುಖ ಬೆಲೆ, (ಸ್ಪಷ್ಟವಾಗಿ ಮುದ್ರಿತಗೊಂಡಿರಬೇಕು, ತಿದ್ದಿದಲ್ಲಿ, ಸ್ಟಿಕರ್ ಅಂಟಿಸಿದಲ್ಲಿ, ಅಂತಹ ಪುಸ್ತಕಗಳನ್ನು ಪರಿಗಣಿಸುವುದಿಲ್ಲ) 8. ಸಾಮಾನ್ಯ ಪ್ರತಿ / ಉತ್ತಮ ಪ್ರತಿ, 9. ಪುಟ ಸಂಖ್ಯೆ, ಮೇಲ್ಕಂಡ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ದೃಢೀಕರಿಸುವುದು

- ಸರ್ಕಾರದ ಆದೇಶ ಸಂಖ್ಯೆ ಇಡಿ 234 ಎಲ್ ಐ ಬಿ 2015 ಬೆಂಗಳೂರು ದಿನಾಂಕ: 22-12-2017 ಮತ್ತು ಇಡಿ ಎಲ್ ಐ ಬಿ 2017 ಬೆಂಗಳೂರು ದನಾಂಕ: 06-04-2018 ರಂತೆ ಆಯ್ಕೆಯಾದ ಕನ್ನಡ ಮತ್ತು ಆಂಗ್ಲ ಪುಸ್ತಕಗಳ ಪ್ರತಿ ಪುಟಕ್ಕೆ ಸರ್ಕಾರ ನಿಗದಿಪಡಿಸಿದ ಬೆಲೆಯ ಆಧಾರದ ಮೇಲೆ ಬೆಲೆಯನ್ನು ನಿಗದಿಪಡಿಸಲಾಗುವುದು.

- ಆಯ್ಕೆಗಾಗಿ ಸಲ್ಲಿಸುವ ಗ್ರಂಥಗಳ ಶೀರ್ಷಿಕೆ ಪುಟದ ಹಿಂಭಾಗದ ಪುಟದಲ್ಲಿ (imprint page) ಈ ಕೆಳಗಿನ ಅಂಶಗಳನ್ನು ಮುದ್ರಿಸುವುದು ಕಡ್ಡಾಯವಾಗಿರುತ್ತದೆ. ಶೀರ್ಷಿಕೆ, ಲೇಖಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಪುಟಗಳು, ಪುಸ್ತಕದ ಅಳತೆ, ಉಪಯೋಗಿಸಿರುವ ಕಾಗದ, ಬೆಲೆ, ವರ್ಷ, ಮುಖಪುಟ, ವಿನ್ಯಾಸ, ಒಳಪುಟ, ರೇಖಾಚಿತ್ರ, ಪ್ರಕಾಶಕರು ಮತ್ತು ಮುದ್ರಕರು ಅವರ ವಿಳಾಸಗಳನ್ನು ಮುದ್ರಿಸಿರಬೇಕು.

- ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸುವ ಪ್ರಕಾಶಕರು/ಪುಸ್ತಕ ಮಾರಾಟಗಾರರು/ಸಂಘ ಸಂಸ್ಥೆಗಳು Shop and Establishment ಕಾನೂನಿನ ಅಡಿಯಲ್ಲಿ ನೊಂದಾಯಿಸಿರಬೇಕು. ಅದಕ್ಕೆ ಸಂಬಂಧಿಸಿದ ನೊಂದಣಿ ಪತ್ರದ ಪ್ರತಿಯನ್ನು (ಕಾಲಕಾಲಕ್ಕೆ) ನವೀಕರಸಿದ ಅರ್ಜಿಯೊಡನೆ ಲಗತ್ತಿಸತಕ್ಕದ್ದು. ಈ ನಿಬಂಧನೆ ಲೇಖಕ ಪ್ರಕಾಶಕರಿಗೆ ಅನ್ವಯಿಸುವುದಿಲ್ಲ.

- ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಮಾರಾಟ ಅಥವಾ ಪ್ರಕಾಶನ ಸಂಸ್ಥೆ ಸಂದರ್ಭನುಸಾರ ರಾಜ್ಯ/ಕೇಂದ್ರ ತೆರಿಗೆ ಇಲಾಖೆಯಿಂದ GST ನೊಂದಾಯಿತ ಸಂಸ್ಥೆಯಾಗಿರಬೇಕು. ಈ ನಿಬಂಧನೆ ಲೇಖಕ ಪ್ರಕಾಶಕರಿಗೆ ಅನ್ವಯಿಸುವುದಿಲ್ಲ.

- ಪುಸ್ತಕ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಮುದ್ರಣ ಮತ್ತು ನೊಂದಣಿ ಕಾನೂನು Copy Right ಕಾಯಿದೆ ಮೇರೆಗೆ ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ Copy Right ವಿಭಾಗದಲ್ಲಿ ಮೂರು ಪ್ರತಿಗಳನ್ನು ಉಚಿತವಾಗಿ ಸಲ್ಲಿಸಿ ನೊಂದಾಯಿಸತಕ್ಕದ್ದು. ಅಲ್ಲದೇ, ನೊಂದಣಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

- ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

- ಆಯ್ಕೆಗಾಗಿ ಸಲ್ಲಿಸುವ ಪುಸ್ತಕಗಳನ್ನು ಕನ್ನಡ, ಆಂಗ್ಲ ಹಾಗೂ ಇತರೆ ಭಾರತೀಯ ಇತರೆ ಭಾಷೆ ಪುಸ್ತಕಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 84 ಎಲ್ಐಬಿ 2017, ಬೆಂಗಳೂರು ದಿನಾಂಕ: 06–04–2018 ಹಾಗೂ ತಿದ್ದುಪಡಿ ಆದೇಶ ದಿನಾಂಕ:05–10–2018 ರನುಸಾರ ಬೆಲೆ ನಿಗದಿಪಡಿಸಲಾಗುವುದು. ವಿವರವನ್ನು ಸರ್ಕಾರಿ ಆದೇಶವನ್ನು ಅಪ್‌ಲೋಡ್ ಮಾಡಲಾದ ವೆಬ್‌ತಾಣ www.karnatakapubliclibrary.gov.in ರಲ್ಲಿ ಪರಿಶೀಲಿಸಬಹುದು.

- ಪುಸ್ತಕ ಸ್ವೀಕೃತಿಯನ್ನು ಮುಖ್ಯ ಗ್ರಂಥಾಲಯಾಧಿಕಾರಿಗಳು (ಪ್ರ), ಯೋಜನಾ ವಿಭಾಗ, ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮುಖಾಂತರ ದಿನಾಂಕ: 15-12-2018 ರ ಸಂಜೆ 5-30ರ ಒಳಗಾಗಿ ತಲುಪುವಂತೆ ಸಲ್ಲಿಸಿ ಸ್ವೀಕೃತಿಯನ್ನು ಪಡೆಯುವುದು. ತದನಂತರ ಬಂದ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸಲಾಗುವುದಿಲ್ಲ.

ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲೆಗಳು

1. ಪುಸ್ತಕದ ಒಂದು ಪ್ರತಿ

2. ಕೃತಿಯು ಪ್ರಥಮ ಮುದ್ರಣ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು.

3. ಶಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನಡಿ ನೋಂದಾಯಿಸಿದ ಆಯಾ ಕಾಲಕ್ಕೆ ನವೀಕರಿಸಿದ ನೋಂದಣಿ ಪತ್ರ/ ಜಿ.ಎಸ್, ಟಿ ನೊಂದಣಿ ಪತ್ರದ ದೃಢೀಕೃತ ನಕಲುಪ್ರತಿ. (ಲೇಖಕ, ಲೇಖಕ-ಪ್ರಕಾಶಕರಿಗೆ ಅನ್ವಯಿಸುವುದಿಲ)

4. ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ದೃಢೀಕೃತ ನಕಲು ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು, ಇಲ್ಲದಿದ್ದಲ್ಲಿ ಪುಸ್ತಕವನ್ನು ಅಯ್ಕೆಗಾಗಿ ಪರಿಗಣಿಸುವುದಿಲ್ಲಾ

5. ಪ್ಯಾನ್ ಕಾರ್ಡ್‌ನ ದೃಢೀಕೃತ ನಕಲು ಪ್ರತಿ

6. ಸರ್ಕಾರದ ಆದೇಶದಂತೆ ಬಿಲ್ಲಿನ ಪಾವತಿಯು ಖಜಾನೆ-2 ಮುಖಾಂತರ ಆಗುವುದರಿಂದ ಲೇಖಕ, ಪ್ರಕಾಶಕರು, ಪ್ರಕಾಶನ ಸಂಸ್ಥೆಗಳು ಹಾಗೂ ಸರಬರಾಜುದಾರರು ಖಜಾನೆ-2ರಲ್ಲಿನ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.

ಈ ಮೇಲ್ಕಂಡ ದಾಖಲಾತಿಗಳು ಇಲ್ಲದಿದ್ದಲ್ಲಿ ಪುಸ್ತಕವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

ನಾ: SCP-TSP (Book List) Ten Not/Paper Noti.

ಕರ್ನಾಟಕ ಸರ್ಕಾರ
ಸಾರ್ವಜನಿಕಗ್ರಂಥಾಲಯ ಇಲಾಖೆ
ನಿರ್ದೇಶಕರಕಛೇರಿ, ವಿಶ್ವೇಶ್ವರಯ್ಯ ಮುಖ್ಯಗೋಪುರ, 4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ,ಬೆಂಗಳೂರು-560 001.

Government of Karnataka
Department of Public Libraries
Office of the Director, 4th floor, Visveshwaraiah main Tower,
Dr. Ambedkar Veedhi, Bangalore-560 001.

---

**ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನ ಗ್ರಂಥಾಲಯಗಳಿಗೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ 2018 ರಲ್ಲಿ ಪ್ರಥಮವಾಗಿ ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆ ಸಮಿತಿಗೆ ಸಲ್ಲಿಸುವ ಅರ್ಜಿ ನಮೂನೆ.**

ಅರ್ಜಿದಾರರಇತ್ತೀಚಿನ ಭಾವಚಿತ್ರ

Application form for sumbmission of 2018 publication books SCP/TSP Scheme in the Department of Public Libraries

Latest Photograph of the Applicant

| | | | |
|---|---|---|---|
| 1. | | ಅರ್ಜಿದಾರರ ಹೆಸರು ಮತ್ತುಖಾಯಂ ವಿಳಾಸ ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ)<br><br>Name of the Applicant and Permanent Address Mobile/Landline Phone No. with Pincode | ಪಿನ್‌ಕೋಡ್<br><br>Pincode: |
| 2. | | ಪ್ರಕಾಶಕರ ಹೆಸರುಮತ್ತುಖಾಯಂವಿಳಾಸ ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | |

| | | | |
|---|---|---|---|
| | | Name of the Publisher And Permanent Address Mobile/Landline Phone No. with Pincode | ಪಿನ್‌ಕೋಡ್<br><br>Pincode: |
| 3. | | ಸರಬರಾಜುದಾರರ ಹೆಸರು ಮತ್ತುಖಾಯಂ ವಿಳಾಸ ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ)<br><br>Name of the Distributor And Permanent Address Mobile/Landline Phone No. with Pincode | ಪಿನ್‌ಕೋಡ್<br><br>Pincode |
| 4. | (a) | ಅರ್ಜಿದಾರರು ಪುಸ್ತಕದ ಲೇಖಕರೆ/ಸಂಪಾದಕರೆ/ ಅನುವಾದಕರೆ ?<br>Is the Applicant Author/Editor/ Translator? | |
| | (b) | ಗ್ರಂಥವುಅನುವಾದವಾಗಿದ್ದಲ್ಲಿ, ಪುಸ್ತಕದ ಮೂಲ ಲೇಖಕರ ಹೆಸರು<br>If the book is translated name of the original Author | |
| 5. | | ಅರ್ಜಿದಾರರುಕಾಪಿರೈಟ್ ಹೊಂದಿರುವರೇ (ಕಾಪಿರೈಟ್ ಹಕ್ಕನ್ನು ಹೊಂದಿರುವವರು ಮಾರಾಟಗಾರರಿಗೆ ಹಕ್ಕನ್ನು ನೀಡಿದ್ದಲ್ಲಿ ರೂ.50/- ಛಾಯಾಕಾಗದದಲ್ಲಿ ಅಫಿಡೇವಿಟ್‌ನ್ನು ಕಡ್ಡಾಯವಾಗಿ ಸಲ್ಲಿಸುವುದು<br>Is the applicant having Copy right (The person who is having Copy right should submit an affidavit in Rs.50/- bond paper in case he/she gives the authorisation to the distributor for suppling the books on behalf) | |
| 6. | (a) | ಪುಸ್ತಕದ ಶಿರೋನಾಮೆ<br>Title of the Book | |
| | (b) | ಉಪ ಶೀರ್ಷಿಕೆ (ಇದ್ದಲ್ಲಿ)<br>Subtitle (If any) | |
| | (c) | ಸಂಪುಟಗಳ ಸಂಖ್ಯೆ (ಇದ್ದಲ್ಲಿ)<br>Volumes(If any) | |

| | | | |
|---|---|---|---|
| | (d) | ಪುಸ್ತಕದ ಅಳತೆ<br>Size of the Book | |
| | (e) | ಪುಟಗಳ ಸಂಖ್ಯೆ<br>No. of Pages | |
| | (f) | ಪುಸ್ತಕದ ಭಾಷೆ<br>Language of the book | |
| | (g) | ಪುಸ್ತಕವು ಉತ್ತಮ ಪ್ರತಿಯೇ ಅಥವಾ ಸಾದ ಪ್ರತಿಯೇ<br>Is the book paper back/Hard bound | |
| | (h) | ಲೇಖಕರ ಹೆಸರು<br>Name of the Author | |
| | (i) | ಪುಸ್ತಕವು ಯಾವ ವಿಷಯದ ಬಗ್ಗೆ ಮಾಹಿತಿ ನೀಡುತ್ತದೆ<br>The book deals with which subject | |
| 7. | | ಪ್ರಕಟಣಾ ವರ್ಷ<br>Year of Publication | |
| 8. | | ಮೂಲ ಅಥವಾಅನುವಾದಿತಗ್ರಂಥವೇ?<br>Is the book original or translated? | |
| 9. | | ಪುಸ್ತಕ ಮುದ್ರಿಸಲು ಬಳಸಿದ ಕಾಗದದಗುಣಮಟ್ಟ<br>(ಜಿ.ಎಸ್.ಎಂ.ನಲ್ಲಿ ನಮೂದಿಸುವುದು)<br>Quality of the Paper used for printing the book<br>(Should be mentioned in GSM) | |
| 10. | | ಅರ್ಜಿದಾರರುಕಡ್ಡಾಯವಾಗಿ ಪ್ಯಾನ್‌ಸಂಖ್ಯೆ ಮತ್ತು ಜಿ,ಎಸ್,ಟಿ ಸಂಖ್ಯೆಯನ್ನು ನಮೂದಿಸುವುದು ಹಾಗೂ ಅದರದೃಢೀಕೃತ ನಕಲು ಪ್ರತಿ ಮತ್ತು ಖಜಾನೆ-2ರಲ್ಲಿ ನೋಂದಣಿಯಾದ ಬಗ್ಗೆ ನೋಂದಣಿ ಸಂಖ್ಯೆಯ ವಿವರವನ್ನುಅರ್ಜಿಯೊಂದಿಗೆಕಡ್ಡಾಯವಾಗಿಲಗತ್ತಿಸತಕ್ಕದ್ದು.<br>The Applicant should compulsarily mention PAN Number/TIN number and a Copy of the same duly attested has to be attached and it is compulsory to attach a copy of registration done in Khajana-II also. | |
| 11. | | ಒಟ್ಟು ಮುದ್ರಿತ ಪ್ರತಿಗಳು<br>No. of Copies printed | |
| 12. | | ಪುಸ್ತಕದ ಮೌಲ್ಯ<br>Cost of the Book | ಉತ್ತಮ ಪ್ರತಿರೂ. . . . . . . . . . .<br>Hard bound Rs. _______<br>ಸಾದಾ ಪ್ರತಿರೂ. . . . . . . . . . .<br>Paper back Rs.__ ______ |

## ಘೋಷಣೆ

ಶ್ರೀಮತಿ / ಶ್ರೀ ______________________ ಆದ ನಾನು, ಮೇಲೆ ದಾಖಲಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆಎಂದು ಪ್ರಮಾಣೀಕರಿಸುತ್ತೇನೆ. ತಪ್ಪು ಮಾಹಿತಿ ನೀಡಿರುವುದುಕಂಡು ಬಂದಲ್ಲಿ,ಯಾವುದೇ ಮಾಹಿತಿ ನೀಡದೆ ನನ್ನಅರ್ಜಿಯನ್ನುತಿರಸ್ಕರಿಸುವ ಮತ್ತು ಹಣವನ್ನುಮುಟ್ಟುಗೋಲುಹಾಕಿಕೊಳ್ಳುವ ಹಕ್ಕನ್ನು ನಿರ್ದೇಶಕರು, ಸಾರ್ವಜನಿಕಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಹೊಂದಿರುತ್ತಾರೆ.

ಸ್ಥಳ :

ದಿನಾಂಕ :

ಅರ್ಜಿದಾರರಸಹಿ ______________

ಅರ್ಜಿದಾರರ ಹೆಸರು ( )

## Declaration

I Smt/Sri__________________ declares that the above information furnished by me is found correct and in case of any wrong information that may be found, The Director, Department of public Libraries, Bangalore is having full power to reject my application and forfeit the bill amount without any prior information

Place: Signature of the Applicant

Date: Name of the Applicant

ವಿ.ಸೂ.:

1. ಪ್ರತಿ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕಅರ್ಜಿ ನಮೂನೆಯಲ್ಲಿ ವಿವರ ಸಲ್ಲಿಸುವುದು.
2. ಅರ್ಜಿಯೊಂದಿಗೆ ಪುಸ್ತಕದಒಂದು ಪ್ರತಿಯನ್ನು ಮುಖ್ಯಗ್ರಂಥಾಲಯಾಧಿಕಾರಿ (ಪ್ರ) ನಿರ್ದೇಶಕರಕಛೇರಿ, ಯೋಜನಾ ವಿಭಾಗ, ಸಾರ್ವಜನಿಕಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು – 560 001 ಇಲ್ಲಿಗೆ ದಿನಾಂಕ: 15-12-2018 ಸಂಜೆ 5.30 ಗಂಟೆ ಒಳಗಾಗಿ ಸಲ್ಲಿಸುವುದು. ನಂತರ ಬಂದ ಪುಸ್ತಕಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿಸದರಿಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 22864990 ಹಾಗೂ 22867358.

Important information:

1. Each title should be submitted in a separate form.
2. Along with the application a copy of the book should be submitted to Chief Librarian, Office of the Director, Planning section, Department of Public Libraries, Vishweshwaraih main Tower, 4th floor, Dr. Ambedkar Veedhi, Bangalore-560 001 on or **before15-12-2018 before 5.30 PM.** The books received after the due date will not be considered. For any further information the above office may be contacted vide phone Nos. 080-22864990 and 080-22867358

**ಕಡ್ಡಾಯವಾಗಿಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:**

1) ಶಾಪ್ಅಂಡ್ಎಸ್ಟಾಬ್ಲಿಷ್‌ಮೆಂಟ್ ಕಾನೂನಿನಡಿ ನೋಂದಾಯಿಸಿದ ಆಯಾ ಕಾಲಕ್ಕೆ ನವೀಕರಿಸಿದ ನೋಂದಣಿ ಪತ್ರದದೃಢೀಕೃತ ನಕಲುಪ್ರತಿಯನ್ನುಕಡ್ಡಾಯವಾಗಿ ಸಲ್ಲಿಸುವುದು. (ಲೇಖಕ, ಲೇಖಕ-ಪ್ರಕಾಶಕರಿಗೆಅನ್ವಯಿಸುವುದಿಲ್ಲ)
2) ರಾಜ್ಯ/ಕೇಂದ್ರತೆರಿಗೆಇಲಾಖೆಯಿಂದ ನೋಂದಾಯಿಸಲ್ಪಟ್ಟ ಜಿ,ಎಸ್,ಟಿ ನೋಂದಣಿ ಪತ್ರದ ದೃಢೀಕೃತ ನಕಲು ಪ್ರತಿ.
3) ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿಅದರದೃಢೀಕೃತ ನಕಲುಪ್ರತಿ.
4) ಅರ್ಜಿದಾರರ ವಿಳಾಸದ ದಾಖಲೆಯ ಪ್ರತಿ- ಮತದಾರರಗುರುತಿನಚೀಟಿ/ಆಧಾರ್‌ಕಾರ್ಡ್
5) ಸರ್ಕಾರಿಆದೇಶದನುಸಾರಎಲ್ಲಾ ಲೇಖಕ ಪ್ರಕಾಶಕರು/ಸರಬರಾಜುದಾರರು/ಪ್ರಕಟಣ ಸಂಸ್ಥೆಗಳು ಖಜಾನೆ-2ರಲ್ಲಿ ಕಡ್ಡಾಯವಾಗಿ ನೋಂದಣಿಯಾಗಬೇಕಾಗಿರುವುದರಿಂದ ನೋಂದಣಿಯಾಗುವುದು. ಈಗಾಗಲೇ ನೋಂದಣಿಯಾಗಿದ್ದಲ್ಲಿ, ನೋಂದಣಿ ಸಂಖ್ಯೆಯ ವಿವರವನ್ನು ಲಗತ್ತಿಸುವುದು.
6) ಯಾವುದೇ ವಿಷಯದಲ್ಲೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

## Important Documents to be submitted along with the application compulsarily

1. Attested copy of the renewed registered under shop and establishment Act. This is not applicable for author and author/publisher.
2. Attested copy of the State/Central tax renewal Copy (GST)
3. Attested copy in case of authorization received for supplying the books.
4. Applicant address proof (Voters ID card or Aadhar Card.)
5. As per Government Order it is compulsory that Authors/Publishers/Distributors Publishing Institutions should register in Khajane-II. If already done the registration number details should be enclosed.
6. Book selection committee decision is final.

ಬ*RRRLF New book sel.format